# ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು

**ಮೂಲಭೂತ ಹಕ್ಕುಗಳು :**

ನಮ್ಮ **ಸಂವಿಧಾನವು** ಪ್ರತಿಯೊಬ್ಬ ನಾಗರಿಕನಿಗೆ **14 ರಿಂದ 32ನೇ ಅನುಚ್ಛೇದಗಳಡಿಯಲ್ಲಿ** ಈ ಕೆಳಗಿನ ಮೂಲಭೂತ ಹಕ್ಕುಗಳನ್ನು ಕೊಡಮಾಡಿದೆ.

**(1) ಸಮಾನತೆಯ ಹಕ್ಕು (ಅನುಚ್ಛೇದ 14):**

ಭಾರತದ ರಾಷ್ಟ್ರ ಕ್ಷೇತ್ರದಲ್ಲಿ ಯಾವುದೇ ವ್ಯಕ್ತಿಗೆ ಕಾನೂನಿಗೆ ಸಮಕ್ಷಮ ಸಮಾನತೆಯನ್ನು ಮತ್ತು ಕಾನೂನಿನ ಸಮಾನ ಸಂರಕ್ಷಣೆಯನ್ನು ರಾಜ್ಯವು ನಿರಾಕರಿಸತಕ್ಕದ್ದಲ್ಲ. ಅಂದರೆ, ಕಾನೂನಿನ ಮುಂದೆ ಪ್ರತಿಯೊಬ್ಬ ವ್ಯಕ್ತಿಯು ಸಮಾನನು ಮತ್ತು ಕಾನೂನಿನ ಸಮಾನ ಸಂರಕ್ಷಣೆಗೆ ಹಕ್ಕುಳ್ಳವನಾಗಿರುತ್ತಾನೆ.

**(2) ಧರ್ಮ, ಜನಾಂಗ, ಜಾತಿ, ಲಿಂಗ, ಮುಂತಾದವುಗಳ ಆಧಾರದ ಮೇಲಿನ ತಾರತಮ್ಯ ತಡೆ ಹಕ್ಕು (ಅನುಚ್ಛೇದ 15):**

ಧರ್ಮ, ಜನಾಂಗ, ಜಾತಿ, ಲಿಂಗ, ಜನ್ಮಸ್ಥಳ ಇವುಗಳಲ್ಲಿ ಯಾವುದೊಂದರ ಆಧಾರದ ಮೇಲೆ ಮಾತ್ರ ಯಾವುದೇ **ನಾಗರಿಕನು (ಪೌರನು)–**

(ಅ) ಅಂಗಡಿಗಳು, ಸಾರ್ವಜನಿಕ ಉಪಹಾರ ಗೃಹ, ಹೋಟೆಲು ಮತ್ತು ಸಾರ್ವಜನಿಕ ಮನರಂಜನಾ ಸ್ಥಳ ಇವುಗಳಿಗೆ ಪ್ರವೇಶಿಸುವ ಸಂಬಂಧದಲ್ಲಿ ; ಅಥವಾ

(ಆ) ಸಾರ್ವಜನಿಕರ ಉಪಯೋಗಕ್ಕಾಗಿ ಇರುವ ಬಾವಿ, ಕೆರೆ, ಸ್ನಾನಘಟ್ಟ, ರಸ್ತೆ, ಸಾರ್ವಜನಿಕರ ಉಪಯೋಗಕ್ಕಿರುವ ಸ್ಥಳ ಮುಂತಾದವುಗಳನ್ನು ಉಪಯೋಗಿಸುವ ಸಂಬಂಧದಲ್ಲಿ;

ಆತನಿಗೆ ಯಾವುದೇ **ನಿರ್ಬಂಧವನ್ನು ಅಥವಾ ನಿಯೋಗ್ಯತೆಯನ್ನು ಅಥವಾ ಷರತ್ತನ್ನು ವಿಧಿಸುವಂತಿಲ್ಲ.**

ಆದಾಗ್ಯೂ, ಮಹಿಳೆ ಮತ್ತು ಮಕ್ಕಳ ಸಂಬಂಧವಾಗಿ ಮತ್ತು ಪ.ಜಾತಿ ಮತ್ತು ಪ.ಪಂಗಡಗಳವರ ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದ ನಾಗರಿಕರ ಏಳಿಗೆಗಾಗಿ ರಾಜ್ಯವು ವಿಶೇಷ ಕಾನೂನುಗಳನ್ನು ಜಾರಿಗೆ ತರಬಹುದು.

**(3) ಸಾರ್ವಜನಿಕ ಸೇವೆಯಲ್ಲಿ ಸಮಾನ ಅವಕಾಶದ ಹಕ್ಕು (ಅನುಚ್ಛೇದ 16):**

ರಾಜ್ಯದ ಅಧೀನದಲ್ಲಿನ ಯಾವುದೇ ಸೇವೆಗೆ ಸಂಬಂಧಿಸಿದ ಅಥವಾ ಯಾವುದೇ ಹುದ್ದೆಗೆ ನೇಮಕ ಮಾಡುವ ವಿಚಾರದಲ್ಲಿ ಭಾರತದ ಎಲ್ಲಾ **ನಾಗರಿಕರಿಗೆ (ಪೌರರಿಗೆ)** ಸಮಾನವಾದ ಅವಕಾಶವಿರತಕ್ಕದ್ದು ಮತ್ತು ಈ ಸಮಾನ ಅವಕಾಶವನ್ನು ಯಾವುದೇ ನಾಗರಿಕನಿಗೆ ಆತನ ಧರ್ಮ, ಜನಾಂಗ, ಜಾತಿ, ಲಿಂಗ, ಜನ್ಮಸ್ಥಳ ವಾಸಸ್ಥಳ ಇವುಗಳಲ್ಲಿ ಯಾವೊಂದರ ಆಧಾರದ ಮೇಲೆ ಮಾತ್ರ ನಿರಾಕರಿಸುವಂತಿಲ್ಲ.

**ಆದಾಗ್ಯೂ,** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಅಥವಾ ಹಿಂದುಳಿದ ವರ್ಗಗಳಿಗೆ ಸೇರಿದ ನಾಗರಿಕರ ಸಂಬಂಧವಾಗಿ ಯಾವುದೇ ಹುದ್ದೆಗೆ ನೇಮಕಕ್ಕೆ ಸಂಬಂಧಿಸಿದಂತೆ ಮೀಸಲಾತಿಯನ್ನು ಕಲ್ಪಿಸುವ ಅಧಿಕಾರ ಸಂಸತ್ತಿಗಿರುತ್ತದೆ.

**(4) ಅಸ್ಪೃಶ್ಯತೆಯ ಆಚರಣೆಯ ವಿರುದ್ಧದ ಹಕ್ಕು (ಅನುಚ್ಛೇದ 17):**

ಅಸ್ಪೃಶ್ಯತೆಯನ್ನು ನಿರ್ಮೂಲನಗೊಳಿಸಲಾಗಿರುತ್ತದೆ. ಯಾವುದೇ ನಾಗರಿಕನ ವಿರುದ್ಧ ಯಾವುದೇ ರೂಪದಲ್ಲಿ ಅದರ ಆಚರಣೆಯನ್ನು ನಿಷೇಧಿಸಲಾಗಿದೆ. **ಅಸ್ಪೃಶ್ಯತೆಯ ಆಚರಣೆ ಶಿಕ್ಷಾರ್ಹ ಅಪರಾಧ.**

**(5) ಬಿರುದು ಬಾವಲಿಗಳ ನಿರ್ಮೂಲನಾ ಹಕ್ಕು (ಅನುಚ್ಛೇದ 18):**

(ಅ) ಸೈನ್ಯದ ಅಥವಾ ಶೈಕ್ಷಣಿಕ ವಿಶೇಷತೆಯನ್ನು ಹೊರತುಪಡಿಸಿ ಬೇರೆ ಯಾವುದೇ ಬಿರುದನ್ನು ರಾಜ್ಯವು ಯಾರಿಗೂ ಕೊಡಮಾಡತಕ್ಕದ್ದಲ್ಲ.

(ಆ) ಭಾರತೀಯ ನಾಗರಿಕನು (ಪೌರನು) ಹೊರ ರಾಷ್ಟ್ರದಿಂದ ಯಾವುದೇ ಬಿರುದನ್ನು ಸ್ವೀಕರಿಸ ತಕ್ಕದ್ದಲ್ಲ.

(ಇ) ಭಾರತೀಯ ನಾಗರಿಕನಲ್ಲದ ವ್ಯಕ್ತಿ ಭಾರತದಲ್ಲಿ ರಾಜ್ಯದ ಅಧೀನದಲ್ಲಿನ ಯಾವುದೇ ಲಾಭದ ಅಥವಾ ವಿಶ್ವಾಸದ ಹುದ್ದೆಯಲ್ಲಿದ್ದಾಗ ರಾಷ್ಟ್ರಾಧ್ಯಕ್ಷರ ಅನುಮತಿ ಇಲ್ಲದೇ ಹೊರ ರಾಷ್ಟ್ರದಿಂದ ಯಾವುದೇ ಬಿರುದನ್ನು ಸ್ವೀಕರಿಸತಕ್ಕದ್ದಲ್ಲ.

**(6) ವಾಕ್ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯ ಮುಂತಾದವುಗಳ ಸಂಬಂಧ ಹಕ್ಕುಗಳ ಸಂರಕ್ಷಣಾ ಹಕ್ಕು: (ಅನುಚ್ಛೇದ 19)**

ನಮ್ಮ ಸಂವಿಧಾನದ 19ನೇ ಅನುಚ್ಛೇದದಡಿಯಲ್ಲಿ ಈ ಕೆಳಗಿನ ಸ್ವಾತಂತ್ರ್ಯದ ಹಕ್ಕುಗಳನ್ನು ಎಲ್ಲಾ ನಾಗರಿಕರಿಗೆ ಕೊಡಮಾಡಲಾಗಿದೆ;

(ಅ) **ವಾಕ್ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು;**

(ಇದು ಪತ್ರಿಕಾ ಸ್ವಾತಂತ್ರ್ಯದ ಹಕ್ಕನ್ನು ಒಳಗೊಂಡಿರುತ್ತದೆ.)

(ಆ) ಶಾಂತಿಯುತವಾಗಿ ಮತ್ತು ನಿರಾಯುಧರಾಗಿ **ಸಭೆ ಸೇರುವ** ಹಕ್ಕು;

(ಇದು **'ಮೆರವಣಿಗೆ ಹೊರಡುವ'** ಹಕ್ಕನ್ನು ಒಳಗೊಂಡಿರುತ್ತದೆ.)

(ಇ) ಸಂಘ, ಸಂಸ್ಥೆಗಳನ್ನು **ಸ್ಥಾಪಿಸುವ ಹಕ್ಕು;**

(ಈ) ಭಾರತ ರಾಷ್ಟ್ರಾದ್ಯಂತ ಅಬಾಧಿತರಾಗಿ **ಸಂಚರಿಸುವ** ಹಕ್ಕು;

(ಉ) ಭಾರತ ರಾಷ್ಟ್ರದ ಯಾವುದೇ ಭಾಗದಲ್ಲಿ **ಖಾಯಂ ಆಗಿ ವಾಸಿಸುವ** ಹಕ್ಕು;

(ಊ) ಯಾವುದೇ **ವೃತ್ತಿಯನ್ನು ಕೈಗೊಳ್ಳುವ,** ಉದ್ಯೋಗ ಅಥವಾ ವ್ಯಾಪಾರದಲ್ಲಿ ತೊಡಗುವ ಹಕ್ಕು;

**ಸ್ವಾತಂತ್ರ್ಯದ ಈ ಹಕ್ಕುಗಳು ಅಬಾಧಿತ ಅಥವಾ ಅನಿಯಂತ್ರಿತವಲ್ಲ**. ರಾಷ್ಟ್ರದ ಸಾರ್ವಭೌಮತ್ವ ಹಾಗೂ ಅಖಂಡತೆ; ಸಾರ್ವಜನಿಕ ಸುವ್ಯವಸ್ಥೆ, ನೈತಿಕತೆ; ಪ.ಜಾತಿ ಮತ್ತು ಪ.ಪಂಗಡಗಳವರ ಹಿತರಕ್ಷಣೆ; ಮುಂತಾದವುಗಳ ದೃಷ್ಟಿಯಿಂದ ಈ ಹಕ್ಕುಗಳ ಚಲಾವಣೆಯ ಹಕ್ಕನ್ನು ನಿಯಂತ್ರಿಸಿ ಶಾಸನವನ್ನು ಜಾರಿಗೆ ತರುವ ಅಧಿಕಾರವು ಶಾಸಕಾಂಗಕ್ಕೆ ಇದೆ. ಆದರೆ ಶಾಸಕಾಂಗ ವಿಧಿಸಿದ ನಿಯಂತ್ರಣ **ಯುಕ್ತವಾದದ್ದೋ ಅಲ್ಲವೋ ಎಂಬುದನ್ನು ನಿರ್ಣಯಿಸುವ ಅಧಿಕಾರವು ಉಚ್ಚ ಮತ್ತು ಸರ್ವೋಚ್ಚ ನ್ಯಾಯಾಲಯಗಳಿಗೆ** ಇರುತ್ತದೆ.

**(7) ಅಪರಾಧಗಳಿಗಾಗಿ ಶಿಕ್ಷೆ ಕುರಿತು ಸಂರಕ್ಷಣೆ ಹಕ್ಕು (ಅನುಚ್ಛೇದ 20):**

(i) **ಕಾನೂನನ್ನು ಉಲ್ಲಂಘಿಸಿದ ಅಪರಾಧಕ್ಕಾಗಿ ಮಾತ್ರ ಶಿಕ್ಷೆ:** ಯಾವುದೇ ವ್ಯಕ್ತಿಯು ಜಾರಿಯಲ್ಲಿರುವ ಕಾನೂನನ್ನು ಉಲ್ಲಂಘಿಸಿದ ಅಪರಾಧವನ್ನೆಸಗಿದಾಗ ಮಾತ್ರ ಆತನನ್ನು ಶಿಕ್ಷೆಗೆ ಗುರಿಪಡಿಸತಕ್ಕದ್ದು.

**(ii) ಕಾನೂನಿನಲ್ಲಿ ವಿಧಿಸಲಾದದ್ದಕ್ಕಿಂತ ಹೆಚ್ಚಿನ ಶಿಕ್ಷೆಯನ್ನು ವಿಧಿಸತಕ್ಕದ್ದಲ್ಲ:**

ಯಾವುದೇ ವ್ಯಕ್ತಿಯನ್ನು ಆತನು ಎಸಗಿದ ಅಪರಾಧಕ್ಕಾಗಿ ಕಾನೂನಿನಡಿಯಲ್ಲಿ ವಿಧಿಸಲಾದ ಶಿಕ್ಷೆಗಿಂತ ಹೆಚ್ಚಿನ ಪ್ರಮಾಣದ ಶಿಕ್ಷೆಗೆ ಗುರಿಪಡಿಸತಕ್ಕದ್ದಲ್ಲ.

**(iii) ಒಂದೇ ಅಪರಾಧಕ್ಕಾಗಿ ವ್ಯಕ್ತಿಯೊಬ್ಬನನ್ನು ಒಂದಕ್ಕಿಂತ ಹೆಚ್ಚು ಸಾರಿ ಶಿಕ್ಷಿಸತಕ್ಕದ್ದಲ್ಲ.**

**(iv)** ಅಪರಾಧವನ್ನೆಸಗಿದ ಆರೋಪದ ಮೇಲೆ ಇರುವ ಯಾವುದೇ ವ್ಯಕ್ತಿಯನ್ನು **ತನ್ನ ವಿರುದ್ಧ ತಾನೇ ಸಾಕ್ಷ್ಯ ನುಡಿಯಬೇಕೆಂದು** ಒತ್ತಾಯಿಸತಕ್ಕದ್ದಲ್ಲ.

**೮) ಜೀವದ ಮತ್ತು ಸ್ಥಾನ ಬದ್ಧತೆಯ ವಿರುದ್ಧ ಸಂರಕ್ಷಣೆ ಹಕ್ಕು (ಅನುಚ್ಛೇದ 21):**

ಯಾವುದೇ ವ್ಯಕ್ತಿಯ **ಪ್ರಾಣ ಅಥವಾ ವೈಯಕ್ತಿಕ (ದೈಹಿಕ) ಸ್ವಾತಂತ್ರ್ಯದ ಹರಣ** ಕಾನೂನಿನನ್ವಯ ಸ್ಥಾಪಿಸಲಾದ ಪ್ರಕ್ರಿಯೆಗನುಸಾರವಾಗಿ ಮಾತ್ರ ಜರುಗತಕ್ಕದ್ದು, ಇಂಥಹ ಪ್ರಕ್ರಿಯೆ ಯುಕ್ತವಾಗಿರಬೇಕು, ನಿಷ್ಪಕ್ಷಪಾತವಾಗಿರಬೇಕು ಮತ್ತು ನ್ಯಾಯ ಸಮ್ಮತವಾಗಿರಬೇಕು

**೯) ದಸ್ತಗಿರಿ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಸಂರಕ್ಷಣಾ ಹಕ್ಕು (ಅನುಚ್ಛೇದ 22):**

**(ಅ) ತನ್ನ ಬಂಧನದ ಕಾರಣಗಳನ್ನು ತಿಳಿದುಕೊಳ್ಳುವ ಹಕ್ಕು:** ಬಂಧನಕ್ಕೆ ಒಳಗಾದ ವ್ಯಕ್ತಿಗೆ ಆತನನ್ನು ಯಾವ ಕಾರಣಕ್ಕಾಗಿ ಮತ್ತು ಯಾವ ಅಪರಾಧವನ್ನೆಸಗಿದ ಆರೋಪದ ಮೇಲೆ ದಸ್ತಗಿರಿ ಮಾಡಲಾಗಿದೆ ಎಂಬುದಾಗಿ ದಸ್ತಗಿರಿ ಮಾಡಿದ ಅಧಿಕಾರಿಯು ದಸ್ತಗಿರಿ ಮಾಡಿದ ತಕ್ಷಣದಲ್ಲಿ ದಸ್ತಗಿರಿಯಾದ ವ್ಯಕ್ತಿಗೆ ತಿಳಿಸತಕ್ಕದ್ದು.

**ಆ) ತನ್ನ ಆಯ್ಕೆಯ ನ್ಯಾಯವಾದಿಯನ್ನು ಸಂಪರ್ಕಿಸುವ ಹಕ್ಕು:** ದಸ್ತಗಿರಿಯಾದ ವ್ಯಕ್ತಿಗೆ ತನ್ನ ಆಯ್ಕೆಯ ನ್ಯಾಯವಾದಿಯನ್ನು ಸಂಪರ್ಕಿಸಿ ಪ್ರಕರಣದಲ್ಲಿ ತನ್ನ ಪ್ರತಿರಕ್ಷೆಗೆ ವ್ಯವಸ್ಥೆ ಮಾಡಿಕೊಳ್ಳುವ ಹಕ್ಕು ಇರುತ್ತದೆ.

**(ಇ) ತನ್ನನ್ನು ಸಮೀಪದ ಮ್ಯಾಜಿಸ್ಟ್ರೇಟರವರ (ದಂಡಾಧಿಕಾರಿಗಳವರ) ಮುಂದೆ ಹಾಜರುಪಡಿಸಿಕೊಳ್ಳುವ ಹಕ್ಕು:** ದಸ್ತಗಿರಿಯಾದ ವ್ಯಕ್ತಿಯನ್ನು ದಸ್ತಗಿರಿ ಮಾಡಿದ ಸಮಯದಿಂದ ಮುಂದಿನ **24 ಗಂಟೆಗಳ ಅವಧಿಯೊಳಗಾಗಿ** (ದಸ್ತಗಿರಿ ಸ್ಥಳದಿಂದ ದಂಡಾಧಿಕಾರಿಗಳವರಲ್ಲಿಗೆ ಕರೆದುಕೊಂಡು ಹೋಗಲು ತಗಲುವ ಸಮಯವನ್ನು ಕಳೆದು) ಸಮೀಪದ ಮ್ಯಾಜಿಸ್ಟ್ರೇಟ್‌ರವರ (ದಂಡಾಧಿಕಾರಿಗಳವರ) ಮುಂದೆ ಹಾಜರುಪಡಿಸತಕ್ಕದ್ದು.

**(10) ಶೋಷಣೆ ವಿರುದ್ಧ ಹಕ್ಕು (ಅನುಚ್ಛೇದ 23, 24):**

**ಮಾನವ ದುರ್ವ್ಯವಹಾರ, ಬೇಗಾರ** ಮತ್ತು ಆ ರೀತಿಯ ಇತರೆ ಒತ್ತಾಯ ಪೂರ್ವಕ ದುಡಿಮೆ ಇವುಗಳನ್ನು ನಿಷೇಧಿಸಿದ್ದು ಅದರ ಉಲ್ಲಂಘನೆ ಶಿಕ್ಷಾರ್ಹವಾದ ಅಪರಾಧವೆಂದು ಘೋಷಿಸಲಾಗಿದೆ. ಅಲ್ಲದೇ 14 **ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು** ಕಾರ್ಖಾನೆ ಮತ್ತು ಗಣಿಗಳಲ್ಲಿ ಅಥವಾ ಅಪಾಯಕಾರಿ ಉದ್ಯೋಗಗಳಲ್ಲಿ ತೊಡಗಿಸುವುದನ್ನೂ ಪ್ರತಿಬಂಧಿಸಲಾಗಿದೆ.

**'ಬೇಗಾರ'** ಎಂದರೆ ಒತ್ತಾಯಪೂರ್ವಕವಾಗಿ ದುಡಿಸಿಕೊಂಡು ಆ ದುಡಿಮೆಗೆ ಸಂಭಾವನೆ ನೀಡದಿರುವುದು ಎಂದರ್ಥ.

**(11) ಧಾರ್ಮಿಕ ಸ್ವಾತಂತ್ರ್ಯದ ಹಕ್ಕು (ಅನುಚ್ಛೇದ 25):**

ಸಾರ್ವಜನಿಕ ಸುವ್ಯವಸ್ಥೆ, ನೈತಿಕತೆ, ಆರೋಗ್ಯ ಮತ್ತು ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದಂತೆ ಸಂವಿಧಾನದ ಇತರ ವಿಧಿಗಳಿಗೊಳಪಟ್ಟಂತೆ, ಪ್ರತಿಯೊಬ್ಬ ವ್ಯಕ್ತಿಗೆ **ತನಗೆ ಇಷ್ಟವಾದ ಧರ್ಮವನ್ನು ಅಂಗೀಕರಿಸುವ, ಆಚರಿಸುವ, ಪ್ರಸಾರ ಮಾಡುವ ಸ್ವಾತಂತ್ರ್ಯದ ಹಕ್ಕು ಇರುತ್ತದೆ**.

**(12) ಧಾರ್ಮಿಕ ಸಂಸ್ಥೆಗಳನ್ನು ಸ್ಥಾಪಿಸುವ, ನಿರ್ವಹಿಸುವ, ಸ್ವಾತಂತ್ರ್ಯದ ಹಕ್ಕು (ಅನುಚ್ಛೇದ 26):**

ಸಾರ್ವಜನಿಕ ಸುವ್ಯವಸ್ಥೆ, ನೈತಿಕತೆ ಮತ್ತು ಆರೋಗ್ಯ ಇವುಗಳಿಗೆ ಒಳಪಟ್ಟು ಯಾವುದೇ ಧಾರ್ಮಿಕ ವರ್ಗವು,

(ಎ) ಧಾರ್ಮಿಕ ಮತ್ತು ಧರ್ಮಾರ್ಥ ಉದ್ದೇಶಗಳಿಗಾಗಿ ಧಾರ್ಮಿಕ ಸಂಸ್ಥೆಯೊಂದನ್ನು ಸ್ಥಾಪಿಸುವ ಮತ್ತು ಅದನ್ನು ಮುಂದುವರೆಸಿಕೊಂಡು ಹೋಗುವ;

(ಬಿ) ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದಂತೆ ತನ್ನ ವ್ಯವಹಾರವನ್ನು ತಾನೇ ನಿರ್ವಹಿಸುವ;

(ಸಿ) ಸ್ಥಿರ ಮತ್ತು ಚರ ಆಸ್ತಿಯನ್ನು ಹೊಂದುವ; ಮತ್ತು

(ಡಿ) ಕಾನೂನಿನನ್ವಯ ಅಂತಹ ಆಸ್ತಿಯ ವಹಿವಾಟು ನಡೆಸುವ; ಹಕ್ಕನ್ನು ಹೊಂದಿರತಕ್ಕದ್ದು.

**(13) ಧಾರ್ಮಿಕ ಉದ್ದೇಶಕ್ಕಾಗಿ ಕರ ವಿಧಿಸತಕ್ಕದ್ದಲ್ಲ (ಅನುಚ್ಛೇದ 27):**

ಯಾವುದೇ ಒಂದು ನಿರ್ದಿಷ್ಟ ಧರ್ಮದ ವೃದ್ಧಿಗಾಗಿ ಅಥವಾ ಅದರ ನಿರ್ವಹಣೆಗಾಗಿ ಖರ್ಚು ಮಾಡಲಿಕ್ಕಾಗಿ ವಿಧಿಸಲಾದ ಕರವನ್ನು ಪಾವತಿಸಬೇಕೆಂದು ಯಾವುದೇ ವ್ಯಕ್ತಿಯನ್ನು ಒತ್ತಾಯಪಡಿಸತಕ್ಕದ್ದಲ್ಲ.

**(14) ಧಾರ್ಮಿಕ ಶಿಕ್ಷಣ ಅಥವಾ ಪ್ರಾರ್ಥನೆಯಲ್ಲಿ ಪಾಲ್ಗೊಳ್ಳದಿರುವ ಹಕ್ಕು (ಅನುಚ್ಛೇದ 28):**

ಸಂಪೂರ್ಣವಾಗಿ ರಾಜ್ಯದ ನಿಧಿಯಿಂದ ನಿರ್ವಹಿಸಲ್ಪಡುವ ಯಾವುದೇ ಶಿಕ್ಷಣ ಸಂಸ್ಥೆಯಲ್ಲಿ ಯಾವುದೇ ಧಾರ್ಮಿಕ ಶಿಕ್ಷಣವನ್ನು ನೀಡತಕ್ಕದ್ದಲ್ಲ. ಅಲ್ಲದೇ ಇಂಥ ಶೈಕ್ಷಣಿಕ ಸಂಸ್ಥೆಯಲ್ಲಿ ಯಾವುದೇ ಧಾರ್ಮಿಕ ಕಾರ್ಯಕ್ರಮದಲ್ಲಿ ಅಥವಾ ಪ್ರಾರ್ಥನೆಯಲ್ಲಿ ಪಾಲ್ಗೊಳ್ಳುವಂತೆ ಯಾವುದೇ ವ್ಯಕ್ತಿಯನ್ನು ಒತ್ತಾಯಿಸತಕ್ಕದ್ದಲ್ಲ.

**(15) ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳು : (ಅನುಚ್ಛೇದ 29):**

(1) **ಅಲ್ಪಸಂಖ್ಯಾತರ ಹಿತಾಸಕ್ತಿಗಳ ರಕ್ಷಣೆ:** ಭಾರತ ರಾಷ್ಟ್ರ ಕ್ಷೇತ್ರದ ಯಾವುದೇ ಭಾಗದಲ್ಲಿ ವಾಸಿಸುವ ನಾಗರಿಕರ (ಪೌರರ) ಯಾವುದೇ ಪಂಗಡ ತನ್ನದೇ ಆದ **ಭಾಷೆ, ಲಿಪಿ ಅಥವಾ ಸಂಸ್ಕೃತಿ** ಹೊಂದಿದ್ದಲ್ಲಿ ಅದು ಅವುಗಳನ್ನು **ಸಂರಕ್ಷಿಸಿಕೊಳ್ಳುವ ಹಕ್ಕನ್ನು ಹೊಂದಿರತಕ್ಕದ್ದು.**

(2) **ಶೈಕ್ಷಣಿಕ ಸಂಸ್ಥೆಗಳಿಗೆ ಪ್ರವೇಶ ನಿರಾಕರಣೆ ವಿರುದ್ಧ ಹಕ್ಕು** : ರಾಜ್ಯದಿಂದ ನಿರ್ವಹಿಸಲ್ಪಟ್ಟ ಅಥವಾ ರಾಜ್ಯ ನಿಧಿಯಿಂದ ನೆರವು ಪಡೆಯುವ ಯಾವುದೇ **ಶೈಕ್ಷಣಿಕ ಸಂಸ್ಥೆಯು** ಯಾವುದೇ **ನಾಗರಿಕನಿಗೆ,** ಆತನ **ಧರ್ಮ, ಮೂಲವಂಶ, ಜಾತಿ, ಭಾಷೆ,** ಇವುಗಳಲ್ಲಿ ಯಾವುದೊಂದರ **ಆಧಾರದ ಮೇಲೆ,** ಪ್ರವೇಶವನ್ನು ನಿರಾಕರಿಸತಕ್ಕದ್ದಲ್ಲ.

**(16) ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆ ಹಾಗೂ ಅವುಗಳ ಆಡಳಿತ ನಿರ್ವಹಣೆಯ ಸಂಬಂಧ ಅಲ್ಪ ಸಂಖ್ಯಾತರ ಹಕ್ಕು (ಅನುಚ್ಛೇದ 30) :**

(ಎ) ಧಾರ್ಮಿಕ ಅಥವಾ ಭಾಷಾ ಅಲ್ಪಸಂಖ್ಯಾತರು ತಮ್ಮ ಆಯ್ಕೆಯ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವ ಮತ್ತು ಅವುಗಳ ಆಡಳಿತವನ್ನು ನಿರ್ವಹಿಸುವ ಹಕ್ಕನ್ನು ಹೊಂದಿರತಕ್ಕದ್ದು.

(ಬಿ) ರಾಜ್ಯವು ಶೈಕ್ಷಣಿಕ ಸಂಸ್ಥೆಗಳಿಗೆ ನೆರವು (ಅನುದಾನ) ಮಂಜೂರು ಮಾಡುವಾಗ ಯಾವುದೇ ಶಿಕ್ಷಣ ಸಂಸ್ಥೆಯ ವಿರುದ್ಧ ಅದು ಧಾರ್ಮಿಕ ಅಥವಾ ಭಾಷಾ ಅಲ್ಪಸಂಖ್ಯಾತರ ಆಡಳಿತಕ್ಕೊಳಪಟ್ಟಿದೆ ಎನ್ನುವ ಕಾರಣದಿಂದ **ತಾರತಮ್ಯ ಎಸಗತಕ್ಕದ್ದಲ್ಲ.**

**(17) ಮೂಲಭೂತ ಹಕ್ಕು ಜಾರಿಗಾಗಿ ಸರ್ವೋಚ್ಚ ನ್ಯಾಯಾಲಯದ ಮೊರೆ ಹೋಗುವ ಹಕ್ಕು (ಅನುಚ್ಛೇದ 32):**

ವ್ಯಕ್ತಿಯೊಬ್ಬನ ಮೂಲಭೂತ ಹಕ್ಕಿಗೆ ಚ್ಯುತಿಯುಂಟಾದಲ್ಲಿ ತನಗೆ ಸಂವಿಧಾನ ಕೊಡಮಾಡಿದ ಹಕ್ಕಿನ ಜಾರಿಗಾಗಿ, ನೇರವಾಗಿ ಸರ್ವೋಚ್ಛ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಸಾಂವಿಧಾನಿಕ ಪರಿಹಾರವನ್ನು ಪಡೆಯಲು ಹಕ್ಕುಳ್ಳವನಾಗಿರುತ್ತಾನೆ. ಈ ಹಕ್ಕೂ ಸಹ ಮೂಲಭೂತ ಹಕ್ಕೇ ಆಗಿದ್ದು **ಇದನ್ನು ರಾಜ್ಯವು ಯಾರಿಗೂ ನಿರಾಕರಿಸುವಂತಿಲ್ಲ.**

**ಮೂಲಭೂತ ಹಕ್ಕಿನ ಜಾರಿ ಕೋರಿ ಅರ್ಜಿಯನ್ನು ಆಯಾ ರಾಜ್ಯದ ಉಚ್ಛ ನ್ಯಾಯಾಲಯಕ್ಕೂ ಸಲ್ಲಿಸಬಹುದಾಗಿದೆ.**

**ಮೂಲಭೂತ ಹಕ್ಕುಗಳನ್ನು ಯಾವಾಗ ಸ್ಥಗಿತಗೊಳಸಬಹುದು?**

ಸಂವಿಧಾನವು ಕೊಡಮಾಡಿದ ಮೂಲಭೂತ ಹಕ್ಕುಗಳನ್ನು **ತುರ್ತು ಪರಿಸ್ಥಿತಿಯ ಘೋಷಣೆ ಜಾರಿಯಲ್ಲಿರುವಾಗ ಮಾತ್ರ** ತುರ್ತು ಪರಿಸ್ಥಿತಿಯ ಕಾಲಾವಧಿ ಪೂರ್ಣ ಅಥವಾ ಅದಕ್ಕಿಂತ ಕಡಿಮೆ ಅವಧಿಗಾಗಿ ರಾಷ್ಟ್ರಪತಿಯವರ ಆದೇಶದನ್ವಯ ಸ್ಥಗಿತಗೊಳಿಸಬಹುದು.

**ಆದಾಗ್ಯೂ, ಅನುಚ್ಛೇದ 20 ಮತ್ತು 21ರಲ್ಲಿ ಕೊಡಮಾಡಿರುವ.** ಅಪರಾಧಗಳಿಗಾಗಿ ಶಿಕ್ಷೆಯ ವಿರುದ್ಧ ರಕ್ಷಣೆಯ ಹಕ್ಕು, ಹಾಗೂ ಜೀವ ಮತ್ತು ವೈಯಕ್ತಿಕ ಸ್ವಾತಂತ್ರ್ಯ ರಕ್ಷಣೆಯ ಹಕ್ಕು ಇವುಗಳ ಜಾರಿಯನ್ನು ಕೋರಿ ನ್ಯಾಯಾಲಯವನ್ನು ಕೇಳಿಕೊಳ್ಳುವ ಈ **ಹಕ್ಕನ್ನು ಸ್ಥಗಿತಗೊಳಸುವಂತಿಲ್ಲ.**

****